ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ಬಿ.ಹೆಚ್. ರಸ್ತೆ, ತುಮಕೂರು. 572103 ದೂ.ಸಂ: 0816–2260220

ಸಂಖ್ಯೆ:ವಿವಿಕಾತು:2021–22: ದಿನಾಂಕ:24.09.2021

# ಪರಿಷ್ಕೃತ ಪ್ರವೇಶಾತಿ ಅಧಿಸೂಚನೆ

## ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಸ್ನಾತಕ ಪದವಿ ಕೋರ್ಸ್‌ಗಳ ಪ್ರವೇಶಾತಿ -2021–22

ತುಮಕೂರು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನಲ್ಲಿ 2021–22ನೇ ಸಾಲಿನ ಪ್ರಥಮ ಬಿ.ಎಸ್ಸಿ, ಬಿ.ಸಿ.ಎ ಮತ್ತು ಬಿ.ವೋಕ್ ಪದವಿ ತರಗತಿಗಳ ಮೊದಲನೇ ಹಂತದ ಪ್ರವೇಶ ಪ್ರಕ್ರಿಯೆಯು ಈಗಾಗಲೇ ಮುಕ್ತಾಯಗೊಂಡಿದ್ದು, ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ತುವಿ:ಶೈವಿ:2021–22:1547 ದಿನಾಂಕ 17.09.2021 ರ ಮತ್ತು ವಿಶ್ವವಿದ್ಯಾನಿಲಯದ ನುತ್ತೋಲೆ ಸಂಖ್ಯೆ: ತುವಿ:ಕಾಅಪ:2021–22:1668 ದಿನಾಂಕ 23.09.2021 ರ ಅನ್ವಯ 2021–22ನೇ ಶೈಕ್ಷಣಿಕ ಸಾಲಿನ ಪ್ರಥಮ ಬಿ.ಎಸ್ಸಿ/ಬಿ.ಸಿ.ಎ ಮತ್ತು ಬಿ.ವೋಕ್ ಸ್ನಾತಕ ಪದವಿಗಳಿಗೆ ಹಾಲಿ ಇರುವ ಪ್ರವೇಶಮಿತಿಗೆ ಶೇಕಡ 20% ಹೆಚ್ಚಿಸಿ ಪ್ರವೇಶಾತಿ ಮಾಡಿಕೊಳ್ಳುವಂತೆ ಸೂಚಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನಲ್ಲಿ ಪ್ರವೇಶ ಪ್ರಕ್ರಿಯೆಯು ಪ್ರಾರಂಭವಾಗಿದ್ದು ಪ್ರವೇಶ ಬಯಸುವ ಅರ್ಹ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ವೆಬ್‌ಸೈಟ್ www.ucst.ac.in ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ದಿನಾಂಕ 25.09.2021 ರಿಂದ ದಿನಾಂಕ 27.09.2021 ರ ವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. **ಈ ಹಿಂದೆ ಪ್ರವೇಶ ಬಯಸಿ ಮೊದಲನೇ ಹಂತದ ಪ್ರವೇಶ ಪ್ರಕ್ರಿಯೆಗೆ ಅರ್ಜಿ ಸಲ್ಲಿಸಿ, ಪ್ರವೇಶಾತಿ ದೊರೆಯದ ವಿದ್ಯಾರ್ಥಿಗಳೂ ಸಹ ಹೊಸದಾಗಿ ಅರ್ಜಿ ಸಲ್ಲಿಸುವುದು.**

ರೂ. 50 ಅರ್ಜಿ ಶುಲ್ಕವಿರುತ್ತದೆ. ಎಸ್.ಎಸ್.ಎಲ್.ಸಿ ಅಂಕಪಟ್ಟಿ / ಜನ್ಮ ದಿನಾಂಕ ದಾಖಲೆ, ಆಧಾರ್ ಕಾರ್ಡ್, ಆಯಾ ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸಿರುವ ಪಿಯುಸಿ/ತತ್ಸಮಾನ ಅಂಕಪಟ್ಟಿ, ನಡತೆ ಪ್ರಮಾಣ ಪತ್ರ, ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ರೂ. 50 ಅರ್ಜಿ ಶುಲ್ಕದ ರಶೀದಿಯ ಪೂರಕ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿಯನ್ನು ತಾವೇ ಇಟ್ಟುಕೊಳ್ಳಬೇಕು. ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ 28.09.2021 ರಂದು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ವೆಬ್‌ಸೈಟ್ ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

ದಿನಾಂಕ 29.09.2021 ರಂದು ಪ್ರಥಮ ಬಿ.ಎಸ್ಸಿ, ಬಿ.ಸಿ.ಎ ಮತ್ತು ಬಿ.ವೋಕ್ ಪದವಿ ಕೋರ್ಸುಗಳಿಗೆ ಅಂತಿಮ ಜ್ಯೇಷ್ಠತಾ ಪಟ್ಟಿಯ ಆಧಾರದನ್ವಯ ಕೌನ್ಸಲಿಂಗ್ ಮೂಲಕ ನಿಯಮಾನುಸಾರ ಪ್ರವೇಶಾತಿ ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ವೆಬ್‌ಸೈಟ್ **www.ucst.ac.in** ನಲ್ಲಿ ನೋಡಬಹುದಾಗಿದೆ.

ಪ್ರಾಂಶುಪಾಲರು.

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572 103